ಸುದ್ದಿ ಸಿಂಚನ

ಷಟಲ್ ಬ್ಯಾಡ್ಮಿಂಟನ್ ಟೂರ್ನಿ 17ರಿಂದ

ಮೊಳಕಾಲ್ಮೂರು: ತಾಲೂಕಿನ ರಾಂಪುರ ಗ್ರಾಮದಲ್ಲಿ ದಸರಾ ಹಬ್ಬದ ಪ್ರಯುಕ್ತ ಅ.17 ರಿಂದ ಎರಡು ದಿನಗಳ ತಾಲೂಕು ಮಟ್ಟದ ಷಟಲ್ ಬ್ಯಾಟ್ ಮಿಂಟನ್ ಟೂರ್ನ್ ಮೆಂಟ್ ಹಮ್ಮಿಕೊಳ್ಳಲಾಗಿದೆ. ನಿವೃತ್ತ ನ್ಯಾಯ ಮೂರ್ತಿ ಎನ್.ವೈ.ಹನುಮಂತಪ್ಪ ಕ್ರೀಡಾಂಗಣದಲ್ಲಿ ಅ.17 ಶನಿವಾರ ಮತ್ತು 18 ಭಾನುವಾರ ಎರಡು ದಿನಗಳ ಕಾಲ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ. ಪ್ರಥಮ ಬಹುಮಾನ 15 ಸಾವಿರ, ದ್ವಿತೀಯ ಬಹುಮಾನ 10 ಸಾವಿರ ಇದ್ದು, ಆಸಕ್ತ ತಂಡಗಳು ಪಿ.ಪರಮೇಶ್ವರಪ್ಪ 9108837349, ಎರ್ರಿಸ್ವಾಮಿ 9449502009, ಜಯರಾಮ್ 9590257926, ಉಮೇಶ್ 7676762424 ಸಂಪರ್ಕಿಸಲು ಕೋರಿದೆ.

ಹಿರಿಯೂರಲ್ಲಿ ಪದವೀಧರ ಕ್ಷೇತ್ರದ ಚುನಾವಣೆ ಪ್ರಚಾರ



ಹಿರಿಯೂರು: ಭಾರತೀಯ ಜನತಾ ಪಾರ್ಟಿ ನಗರ ಘಟಕದ ವತಿಯಿಂದ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆ ಪ್ರಚಾರವನ್ನು ನಗರದ ಇಲಾಖೆಗಳಲ್ಲಿ, ವಿವಿಧ ವಾರ್ಡ್ ಗಳಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಮಂಜುನಾಥ್ ಹೆಗ್ಗೆರೆ, ಪದವೀಧರ ಕ್ಷೇತ್ರದ ಚುನಾವಣೆ ಉಸ್ತುವಾರಿ ಕೇಶವಮೂರ್ತಿ, ಬಿಜೆಪಿ ಹಿರಿಯ ಮುಖಂಡರಾದ ಎಂ.ವಿ.ಹರ್ಷ, ಎಂ.ಎಸ್.ರಾಘವೇಂದ್ರ, ಮಂಜುಳಾ, ಯೋಗೇಶ್, ನಾಗೇಶ್, ವೇದಮೂರ್ತಿ, ಸಂತೋಷ್ ಮುಂತಾದವರು ಹಾಜರಿದ್ದರು.

ಗಂಗಾ ಸಮೂಹ ಸಂಸ್ಥೆಯಿಂದ ನಾಳೆ ಉದ್ಯೋಗ ಮೇಳ

ಹಿರಿಯೂರು: ನಗರದ ಗಂಗಾ ಸಮೂಹ ವಿದ್ಯಾ ಸಂಸ್ಥೆಗಳು ಹಾಗೂ ಧಾರವಾಡ ಕನೆಕ್ಟ್ ಸಂಸ್ಥೆಯ ಸಹಯೋಗದಲ್ಲಿ ಉದ್ಯೋಗಾಕಾಂಕ್ಷಿಗಳಿಗಾಗಿ ಬೃಹತ್ ಉದ್ಯೋಗ ಮೇಳವನ್ನು ಅಕ್ಟೋಬರ್ 17 ರಂದು ಆಯೋಜಿಸಲಾಗಿದೆ. ಈ ಉದ್ಯೋಗ ಮೇಳದ ಮೂಲಕ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಹಾಗೂ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಈ ಉದ್ಯೋಗ ಮೇಳದಲ್ಲಿ ಟಾಟಾ ಮೋಟಾರ್ಸ್, ಎನ್‌ಟಿಟಿಎಫ್, ಲುಮ್ಯಾಕ್ಸ್ ಡೆನ್ಸೊ, ಕಿರ್ಲೋಸ್ಕರ್, ಸಾನ್ಸೆರಾ ಎಂಜಿನಿಯರಿಂಗ್, ಫೆಡರಲ್ ಮೊಗಲ್ ಸೇರಿದಂತೆ ವಿವಿಧ ಪ್ರತಿಷ್ಠಿತ ಕಂಪನಿಗಳು ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಉದ್ಯೋಗಾವಕಾಶಗಳು ಲಭ್ಯವಿರಲಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಮತ್ತು ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು ಇದು ಉತ್ತಮ ವೇದಿಕೆಯಾಗಲಿದೆ. ಅಭ್ಯರ್ಥಿಗಳು ಬಯೋಡೇಟಾ 10 ಪ್ರತಿಗಳು, ಅಂಕಪಟ್ಟಿಗಳು, ಆಧಾರ್‌ಕಾರ್ಡ್, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು 8 ಪ್ರತಿಗಳನ್ನು ತರಬೇಕು. ಆಸಕ್ತ ಉದ್ಯೋಗಾಕಾಂಕ್ಷಿಗಳು ಈ ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಅಲ್ಲದೆ ಪೋಷಕರು, ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಪರಿಚಿತ ಉದ್ಯೋಗಾಕಾಂಕ್ಷಿಗಳಿಗೆ ಈ ಉದ್ಯೋಗ ಮೇಳದ ಮಾಹಿತಿಯನ್ನು ತಲುಪಿಸುವ ಮೂಲಕ ಸಹಕರಿಸಬೇಕೆಂದು ಸಂಸ್ಥೆಯ ವತಿಯಿಂದ ಮನವಿ ಮಾಡಲಾಗಿದೆ.

ಬಸವಾದಿ ಶರಣರ ವಚನಗಳು ಸರ್ವಕಾಲಕ್ಕೂ ಶ್ರೇಷ್ಠ

ಬಸವ ಮಹಾಂತಾ ಸ್ವಾಮೀಜಿ ಅಭಿಮತ | ವಚನ ಕಮ್ಮಟ ಪರೀಕ್ಷೆ ರ್‍ಯಾಂಕ್ ವಿಜೇತರ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ



ಚಿತ್ರದುರ್ಗ ಮುರುಘಾಮಠದಲ್ಲಿ ನಡೆಯುತ್ತಿರುವ ಶರಣ ಸಂಸ್ಕೃತಿ ಉತ್ಸವದಲ್ಲಿ ವಚನ ಕಮ್ಮಟ ಪರೀಕ್ಷೆ ರ್‍ಯಾಂಕ್ ವಿಜೇತರಿಗೆ ಪ್ರಶಸ್ತಿ ಪ್ರದಾನ ನೆರವೇರಿಸಲಾಯಿತು.

ಬಸವಾದಿ ಶರಣರ ವಚನಗಳು ಸರ್ವಕಾಲಕ್ಕೂ ಶ್ರೇಷ್ಠವೆಂದು ಶಿರಸಂಗಿ ಶ್ರೀ ಮಹಾಲಿಂಗೇಶ್ವರ ಮಠದ ಶ್ರೀ ಬಸವ ಮಹಾಂತಾ ಸ್ವಾಮೀಜಿ ಹೇಳಿದರು.

ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಇಲ್ಲಿನ ಅನುಭವಮಂಟಪದಲ್ಲಿ ಗುರುವಾರ ಆಯೋಜಿಸಿದ್ದ ವಚನ ಕಮ್ಮಟ ಪರೀಕ್ಷೆಯ ರ್‍ಯಾಂಕ್ ವಿಜೇತರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶರಣರ ವಚನಗಳು ನಮ್ಮ ಅಂತರಂಗದಲ್ಲಿ ಪ್ರವೇಶ ಮಾಡಿದಾಗ ಮಾತ್ರ ನಮ್ಮ ಜೀವನ ಆದರ್ಶವಾಗಿಸಲು ಸಾಧ್ಯವಾಗುತ್ತದೆ ಎಂದರು.

ಚಿತ್ರದುರ್ಗ ನಗರ ಸಭೆ ಮಾಜಿ ಅಧ್ಯಕ್ಷ ಸಿ.ಟಿ.ಕೃಷ್ಣಮೂರ್ತಿ ಮಾತನಾಡಿ, ನಮ್ಮ ಬದುಕಿನಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭಾವನೆಗಳನ್ನು ಬಿಡಬೇಕು. ಅದನ್ನೇ ಶರಣರು ನಮಗೆ ಹೇಳಿದ್ದಾರೆ. ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಅಖಿಲ ಭಾರತ ವೀರಶೈವ ಮಹಾ ಸಭಾದ ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷ ಮಹಡಿ ಶಿವಮೂರ್ತಿ ಮಾತನಾಡಿ, ಶರಣ ಸಂಸ್ಕೃತಿ ಉತ್ಸವಕ್ಕೆ ತನ್ನದೆ ಆದ ಸ್ಥಾನವಿದೆ. ನಾವು ಮೊದಲಿನಿಂದಲೂ ಶ್ರೀ ಮಠದ ಕೆಲಸಗಳೊಂದಿಗೆ ನಿರಂತರವಾಗಿ ತೊಡಗಿಸಿಕೊಂಡಿದ್ದೇವೆ. ಶರಣರ ವಚನಗಳು ನಮ್ಮ ಜೀವನವನ್ನು ಹಸನಗೊಳಿಸುವ ದಿವ್ಯ ಔಷಧ ಇದ್ದಹಾಗೆ. ಆಧುನಿಕ ಸಂದರ್ಭದಲ್ಲಿ ಮೊಬೈಲ್ ಗೀಳಿನಿಂದ ವಚನಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಹಾವೇರಿ ಸರ್ಕಾರಿ ನಿವೃತ್ತ ಸರ್ಕಾರಿ ಅಭಿಯೋಜಕ ವಿ.ಜಿ ಯಳಗೇರಿ ಮಾತನಾಡಿ ಮುರುಘರಾಜೇಂದ್ರ ಬೃಹನ್ಮಠ ಭವ್ಯ ಪರಂಪರೆಯನ್ನು ಹೊಂದಿದೆ. ಕರ್ನಾಟಕದಿಂದ ಇಡಿ ವಿಶ್ವಕ್ಕೆ ಬಸವ ತತ್ವಗಳನ್ನು ಪಸರಿಸುವ ಕೆಲಸವನ್ನು ಶ್ರೀ ಮಠ ಮಾಡುತ್ತ ಬಂದಿದೆ. ಜನಮಾನಸಕ್ಕೆ ಶರಣರ ತತ್ವಗಳನ್ನು ಮಾನವೀಯ ಮೌಲ್ಯಗಳನ್ನು ಮುಟ್ಟಿಸುವಲ್ಲಿ ಮಠದ ಪಾತ್ರ ಮಹತ್ವವಾದದ್ದು. ಶರಣರ ಅನುಭವ ಮಂಟಪದಲ್ಲಿ ಜರುಗಿದ ಚರ್ಚೆಗಳು ವಿಚಾರಗಳು ಈ ಜಗತ್ತಿಗೆ ಆದರ್ಶಪ್ರಾಯವಾದ ಬದುಕನ್ನು ಸಾಗಿಸಲು ಸಾಕಾರಗೊಂಡಿವೆ ಎಂದರು.

ಹುಬ್ಬಳ್ಳಿ ಬಸವಕೇಂದ್ರದ ಕುಮಾರಣ್ಣ ಹುಗ್ಗಿಶೆಟ್ಟರ್ ಮಾತನಾಡಿ ಶರಣರ ವಚನಗಳನ್ನು ಓದುವುದರಿಂದ ಬದುಕು ಸುಂದರವಾಗುತ್ತದೆ. ಗುರುಮಠದ ಪರಂಪರೆಯಿಂದ ಪಾಠ ಪ್ರವಚನಗಳಿಂದ ನಮ್ಮ ಬದುಕಿನಲ್ಲಿ ಆಧ್ಯಾತ್ಮ ಜೀವನ ಹಾಗೂ ಶಿವಾನುಭವದಂತಹವು ವಿದ್ಯಾರ್ಥಿಗಳಿಗೆ ಶಿಸ್ತನ್ನು ಕಲಿಸುತ್ತವೆ ಎಂದರು.

ಚಿತ್ರದುರ್ಗ ಚರ್ಮ ವೈದ್ಯರಾದ ಡಾ.ಎಂ.ಯೋಗೇಂದ್ರ, ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಎಂ.ಚಂದ್ರಪ್ಪ, ಗುಮ್ಮನೂರು ಬಸವಕೇಂದ್ರದ ಕೆ.ಎಂ ಚೆನ್ನಪ್ಪ ಮಾತನಾಡಿದರು. ಜಮುರಾ ಕಲಾವಿದ ಉಮೇಶ ಪತ್ತಾರ್‌ವಚನ ಪ್ರಾರ್ಥನೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ವಚನ ಕಮ್ಮಟ ಪರೀಕ್ಷೆ ರ್‍ಯಾಂಕ್ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೃತಕ ಬುದ್ಧಿಮತ್ತೆಯಿಂದ ಸಂವೇದನಾಶೀಲತೆ ದೂರ

ಪ್ರೊ.ತಾರಿಣಿ ಅಭಿಮತ | ಸಾಂಸ್ಕೃತಿಕ ಸಮಿತಿ, ವಿವಿಧ ಸಮಿತಿ ಚಟವಟಿಕೆಗಳ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ



ಚಿತ್ರದುರ್ಗ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಸಾಂಸ್ಕೃತಿಕ ಸಮಿತಿ ಉದ್ಘಾಟನೆಯನ್ನು ತುಮಕೂರಿನ ನಿವೃತ್ತ ಪ್ರಾಧ್ಯಾಪಕ ಸಿದ್ದಲಿಂಗಯ್ಯ ನೆರವೇರಿಸಿದರು. ಪ್ರೊ.ತಾರಿಣಿ ಆರ್. ಶುಭದಾಯಿನಿ ಇದ್ದಾರೆ.

ಪ್ರಸ್ತುತ ಕಾಲಘಟ್ಟದಲ್ಲಿ ಎಲ್ಲಾ ವಲಯಗಳಲ್ಲಿ ಹೆಚ್ಚುತ್ತಿರುವ ಕೃತಕ ಬುದ್ಧಿಮತ್ತೆಯ ಕಾಲದಲ್ಲಿ ನಾವಿದ್ದೇವೆ. ಇದರಿಂದಾಗಿ ಸಂವೇದನಾಶೀಲತೆ ಜೊತೆಗೆ ವಿವಿಧ ಸೃಜನಶೀಲ ಕೌಶಲಗಳಿಂದ ದೂರವಾಗುತ್ತಿದ್ದೇವೆ ಎಂದು ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ತಾರಿಣಿ.ಆರ್ ಶುಭಾ ದಾಯಿನಿ ಆತಂಕ ವ್ಯಕ್ತಪಡಿಸಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಸಮಿತಿ ಹಾಗೂ ವಿವಿಧ ಸಮಿತಿ ಚಟವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಂಸ್ಕೃತಿಕವಾಗಿ ನಮ್ಮನ್ನು ಗಟ್ಟಿಗೊಳಿಸುವ ಮತ್ತು ಪದವಿ ತರಗತಿಯಲ್ಲಿ ಏರ್ಪಡಿಸುವ ಪಠ್ಯೇತರ ಚಟವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಒಳ್ಳೆಯ ಆಲೋಚನೆ ಬೆಳೆಸಿ ಕೊಂಡು ಮುಂದಿನ ದಿನಗಳಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿದ ತುಮಕೂರು ಇತಿ ಹಾಸ ನಿವೃತ್ತ ಪ್ರಾಧ್ಯಾಪಕ ಸಿದ್ದಲಿಂಗಯ್ಯ ಮಾತನಾಡಿ, ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರ ಅಗ್ನಿ ರೆಕ್ಕೆಗಳು ಕೃತಿ ಮತ್ತು ಇಂಗ್ಲಿಷಿನ ಶ್ರೇಷ್ಠ ಕವಿ ವಿಲಿಯಂ ಶೇಕ್ಸ್ ಪಿಯರ್‌ಅವರ ಸೃಜನಶೀಲ ಬರಹಗಳ ಓದು ನಮ್ಮನ್ನು ಆತ್ಮಾವಲೋಕನ ಮಾಡಿಸುತ್ತವೆ. ಪ್ರಸ್ತುತ ಸಮಾಜದಲ್ಲಿ ತಿಳಿದು ಬದುಕುವ ಬದಲಿಗೆ ಒಬ್ಬರನ್ನು ಒಬ್ಬರು ತಿಂದು ಬದುಕುತ್ತಿರುವ ಸಂಸ್ಕೃತಿ ಹೆಚ್ಚಾಗಿದೆ. ನಮ್ಮ ಮಾತು ಯಾರಿಗೂ ನೋವುಂಟು ಮಾಡದಿರುವಂತೆ ಎಚ್ಚರಿಕೆ ವಹಿಸ ಬೇಕು. ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ಗಳು ತೊಡಗಿಸಿಕೊಂಡು ಗುರುತಿಸಿಕೊಳ್ಳಬೇಕು. ತಮ್ಮಲ್ಲಿನ ಚಂಚಲ ಮನಸ್ಸನ್ನು ಶುದ್ಧಿಗೊಳಿಸಿಕೊಳ್ಳುವ ಮೂಲಕ ಮನೋರೋಗ ದೂರ ಮಾಡಿಕೊಳ್ಳಬೇಕು ಎಂದು ಹೇಳಿದರು.

ವೃತ್ತಿ ಪರ ತರಬೇತಿದಾರ ಚಳ್ಳಕೆರೆ ಗಜೇಂದ್ರ ಮಾತ ನಾಡಿದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರೊ.ಬಿ.ಇ.ಜಗನ್ನಾಥ, ಐಕ್ಯೂಎಸಿ ಸಂಚಾಲಕಿ ಪ್ರೊ.ಕೆ.ಲೀಲಾವತಿ ಮಾತನಾಡಿದರು. ವಿದ್ಯಾರ್ಥಿನಿ ಸಂಗೀತಾ ಅವರು ಪ್ರದರ್ಶಿಸಿದ ಭರತ ನಾಟ್ಯ ಕಾರ್ಯಕ್ರಮ ಗಮನ ಸೆಳೆಯಿತು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಳು ನಡೆದವು. ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ.ಹನುಮಂತಪ್ಪ, ರೆಡ್‌ಕ್ರಾಸ್ ಸಂಚಾಲಕ ಪ್ರೊ.ಪ್ರದೀಪ್ ಕುಮಾರ್, ಪರೀಕ್ಷಾ ನಿಯಂತ್ರಣ ಅಧಿಕಾರಿ ಪ್ರೊ ಎಸ್ ಬಿ. ಶಿವಪ್ರಸಾದ್, ಎನ್ ಎಸ್ ಎಸ್ ಅಧಿಕಾರಿ ಪ್ರೊ ಬಸವರಾಜ, ಪ್ರಸಾದ್, ರೋ ವರ್ಸ್ ರೇಂಜರ್ಸ್ ಸಂಚಾಲಕಿ ಪ್ರೊ ಬಿ.ಜಯಮ್ಮ, ಮುರಳೀಧರ, ಕ್ರೀಡಾಧಿ ಕಾರಿ ಪ್ರೊ.ಪ್ರಸನ್ನ ಕುಮಾರ್, ಎನ್‌ಸಿಸಿ ಅಧಿಕಾರಿ ಪ್ರೊ. ಮಂಜುನಾಥ, ಪ್ರಾಧ್ಯಾಪಕಿ ಪ್ರೊ. ಮೇಘನಾ, ಪ್ರೊ.ಸೌಮ್ಯ ಇದ್ದರು.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅನುಸರಿಸಿ: ಸಿ.ಮಂಜುನಾಥ



• **ಕನ್ನಡಪ್ರಭ ವಾರ್ತೆ** ಹಿರಿಯೂರು

ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿದ್ಯಾರ್ಥಿಗಳು ಅನುಸರಿಸುವುದು ಉತ್ತಮ ಬೆಳವಣಿಗೆಯಾಗಿದ್ದು ನಾಗರೀಕ ಸಮಾಜದ ನಿರ್ಮಾಣಕ್ಕಾಗಿ ಯುವಶಕ್ತಿಯ ಪಾತ್ರ ಮುಖ್ಯ ಎಂದು ಉಪನ್ಯಾಸಕ ಸಿ.ಮಂಜುನಾಥ್ ಹೇಳಿದರು.

ನಗರದ ಗುರುಭವನದಲ್ಲಿ ನಡೆದ ಯುವ ಸಂಸತ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಕಾನೂನುಗಳನ್ನು ವಿದ್ಯಾರ್ಥಿಗಳು ಗೌರವಿಸಬೇಕು. ವಿದ್ಯಾರ್ಥಿಗಳಿಗೆ ನಾಯಕತ್ವ ಗುಣಗಳನ್ನು ಕಲಿಸಬೇಕು. ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆಯನ್ನು ಮೂಡಿಸಬೇಕು. ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ಯುವಕರು ಕೃಷಿಯಲ್ಲಿ ಪ್ರಗತಿಯನ್ನು ಸಾಧಿಸಬಹುದು ಎಂದರು. ಸಂಪನ್ಮೂಲ ವ್ಯಕ್ತಿ ಆರ್.ತಿಪ್ಪೇಸ್ವಾಮಿಯವರು ವಿಧಾನಸಭೆಯ ಕಲಾಪಗಳ ಬಗ್ಗೆ, ಸದನದ ನಡಾವಳಿಗಳ ಬಗ್ಗೆ, ಸಭಾಪತಿಗಳ ಕಾರ್ಯ, ಪ್ರಶ್ನೋತ್ತರ ವೇಳೆ, ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ, ವಿದೇಯಕದ ಮಂಡನೆ ವಿದೇಯಕದ ಮೇಲಿನ ಚರ್ಚೆ ವಿದೇಯಕ ಅಂಗೀಕಾರದ ಬಗ್ಗೆ ವಿಸ್ತೃತವಾಗಿ ವಿವರಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕ ಯಶೋಧರ ಟಿ, ರಾಮಣ್ಣ, ದಯಾನಂದ್, ಮನೋಹರ್ ಮುಂತಾದವರು ಹಾಜರಿದ್ದರು.



ವೇದಿಕೆಯಲ್ಲಿ ಕುಸಿದು ಬಿದ್ದು ಕಲಾವಿದ ಶಿವಣ್ಣ ನಿಧನ

ನಾಟಕ ಪ್ರದರ್ಶನದ ವೇಳೆ ಘೋರ ದುರಂತ | ಇದ್ದಕ್ಕಿದ್ದಂತೆ ತೀವ್ರ ಹೃದಯಾಘಾತ ಸಂಭವ

• **ಕನ್ನಡಪ್ರಭ ವಾರ್ತೆ** ಚಳ್ಳಕೆರೆ



ಸಾಮಾಜಿಕ ನಾಟಕ ಪ್ರದರ್ಶನ ನಡೆಯುತ್ತಿದ್ದ ವೇಳೆ ವೇದಿಕೆಯ ಮೇಲೆಯೇ ಕಲಾವಿದರೊಬ್ಬರು ತೀವ್ರ ಹೃದಯಾಘಾತದಿಂದ ಕುಸಿದು ಬಿದ್ದು ಮೃತಪಟ್ಟಿರುವ ಅತ್ಯಂತ ದುರದೃಷ್ಟಕರ ಮತ್ತು ಆಘಾತಕಾರಿ ಘಟನೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ತಡರಾತ್ರಿ ನಡೆದಿದೆ.

ಚಳ್ಳಕೆರೆ ತಾಲೂಕಿನ ತಳಕು ಪೊಲೀಸ್ ಠಾಣಾ ವ್ಯಾಪ್ತಿಯ ಭೋಗನಹಳ್ಳಿ ಗ್ರಾಮದ ನಿವಾಸಿಯಾದ ಕಲಾವಿದ ಶಿವಣ್ಣ (45) ವೇದಿಕೆಯ ಮೇಲೆಯೇ ಕೊನೆಯುಸಿರೆಳೆದ ದುರ್ದೈವಿಯಾಗಿದ್ದಾರೆ. ಗ್ರಾಮದಲ್ಲಿ ತಡರಾತ್ರಿ ಹಮ್ಮಿಕೊಳ್ಳಲಾಗಿದ್ದ ಹೃದಯ ಜಾರಿತು ಪ್ರೀತಿ ಉಳಿಯಿತು ಎಂಬ ಸಾಮಾಜಿಕ ನಾಟಕ ಪ್ರದರ್ಶನದಲ್ಲಿ ಶಿವಣ್ಣ ಅವರು ಸಿಐಡಿ ಶರತ್ ಎಂಬ ಪಾತ್ರವನ್ನು ನಿರ್ವಹಿಸುತ್ತಿದ್ದರು. ನಾಟಕದ ದೃಶ್ಯವೊಂದರಲ್ಲಿ ಸಹ-ಕಲಾವಿದೆಯ ಜೊತೆಗೆ ನೃತ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಶಿವಣ್ಣ ಅವರಿಗೆ ಇದ್ದಕ್ಕಿದ್ದಂತೆ ತೀವ್ರ ಹೃದಯಾಘಾತ ಸಂಭವಿಸಿದೆ. ಇದರ ಪರಿಣಾಮವಾಗಿ ಅವರು ವೇದಿಕೆಯ ಮೇಲೆಯೇ ತಕ್ಷಣವೇ ಕುಸಿದು ಬಿದ್ದಿದ್ದಾರೆ. ಮೊದಲಿಗೆ ಇದು ನಾಟಕದ ಅಭಿನಯದ ಒಂದು ಭಾಗ ಇರಬಹುದು ಎಂದು ಭಾವಿಸಿದ್ದ ಪ್ರೇಕ್ಷಕರು ಮತ್ತು ಸಹ-ಕಲಾವಿದರು, ಶಿವಣ್ಣ ಅವರು ಯಾವುದೇ ಚಲನವಲನವಿಲ್ಲದೆ ಬಿದ್ದಿರುವುದನ್ನು ಕಂಡು ತಕ್ಷಣವೇ ವೇದಿಕೆಯತ್ತ ಧಾವಿಸಿದ್ದಾರೆ.

ಕಲಾವಿದ ಶಿವಣ್ಣ ಅವರು ನೃತ್ಯ ಮಾಡುತ್ತಾ ವೇದಿಕೆಯ ಮೇಲೆಯೇ ಕುಸಿದು ಬಿದ್ದು ಕೊನೆಯುಸಿರೆಳೆಯುತ್ತಿರುವ ಇಡೀ ದೃಶ್ಯಾವಳಿಗಳು ಅಲ್ಲಿ ನೆರೆದಿದ್ದ ಸಾರ್ವಜನಿಕರ ಮೊಬೈಲ್ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದು, ಸದ್ಯ ಈ ಹೃದಯ ವಿದ್ರಾವಕ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರವಾಗಿ ವೈರಲ್ ಆಗಿದೆ. ಶಿವಣ್ಣ ಅವರ ಆಕಸ್ಮಿಕ ಅಗಲಿಕೆಗೆ ರಂಗಭೂಮಿ ಪ್ರೇಮಿ ಗಳು ಹಾಗೂ ಸಾರ್ವಜನಿಕರು ತೀವ್ರ ಸಂತಾಪ ಸೂಚಿಸುತ್ತಿದ್ದಾರೆ. ಘಟನೆ ಸಂಭವಿಸಿದ ತಕ್ಷಣವೇ ಸ್ಥಳೀಯ ಗ್ರಾಮ ಸ್ಥರು ಹಾಗೂ ನಾಟಕದ ತಂಡದವರು ಶಿವಣ್ಣ ಅವರನ್ನು ರಕ್ಷಿಸಲು ಮುಂದಾದರಾದರೂ, ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದರು ಎನ್ನಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಸದ್ಯ ತಳಕು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾ ಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಗ್ರಾಮದಲ್ಲಿ ಸಂಭ್ರಮದಿಂದ ನಡೆಯುತ್ತಿದ್ದ ನಾಟಕ ಪ್ರದರ್ಶನವು, ಕಲಾವಿದನ ಸಾವಿನೊಂದಿಗೆ ಇಡೀ ಭೋಗನಹಳ್ಳಿ ಗ್ರಾಮದಲ್ಲಿ ಕಣ್ಣೀರಿನ ಕಡಲನ್ನು ಸೃಷ್ಟಿಸುವಂತೆ ಮಾಡಿದೆ.

ಜನಪರ ಕಾಳಜಿ | ಉದ್ಯೋಗ ಖಾತ್ರಿ ಯೋಜನೆಯಡಿ ಕಾಮಗಾರಿ ಸ್ಥಳಕ್ಕೆ ಡಾ.ಆಕಾಶ್ ಭೇಟಿ

ಸಮರ್ಪಕ ಕೂಲಿ ಪಾವತಿಗೆ ಸಿಇಒ ಸೂಚನೆ

• **ಕನ್ನಡಪ್ರಭ ವಾರ್ತೆ** ಚಳ್ಳಕೆರೆ



ಚಳ್ಳಕೆರೆ ತಾಲೂಕಿನ ದೊಡ್ಡೇರಿ ಗ್ರಾಮದ ಕೆರೆ ಹೂಳೆತ್ತುವ ಸ್ಥಳಕ್ಕೆ ಜಿಲ್ಲಾ ಪಂಚಾಯಿತಿ ಸಿಇಒ ಡಾ.ಎಸ್.ಆಕಾಶ್ ಗುರುವಾರ ಭೇಟಿ ನೀಡಿ ಕೂಲಿಕಾರರೊಂದಿಗೆ ಮಾತನಾಡಿದರು.

ತಾಲೂಕಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಡಿ ದುಡಿಯುವ ಕೂಲಿ ಕಾರ್ಮಿಕರ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ನಿಯಮಾನುಸಾರ ಪ್ರತಿ ವಾರದ ಕೂಲಿ ಬಟವಾಡೆಯನ್ನು ಕಾರ್ಮಿಕರ ಖಾತೆಗೆ ತಲುಪಿಸುವ ಕೆಲಸವಾಗಬೇಕು ಎಂದು ಜಿಪಂ ಮುಖ್ಯ ಕಾರ್ಯ ನಿರ್ವಹಣಾ ಧಿಕಾರಿ ಡಾ.ಎಸ್.ಆಕಾಶ್ ಅವರು ತಾಪಂ ಇಒ ಎಚ್.ಶಶಿಧರ್‌ಅವರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ತಾಲೂಕಿನ ವಿವಿಧ ಗ್ರಾಪಂ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ನಡೆ ಯುತ್ತಿರುವ ಪ್ರಗತಿ ಹಂತದ ಕಾಮಗಾರಿ ಸ್ಥಳಗಳಿಗೆ ಗುರುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು. ದೊಡ್ಡೇರಿ ಗ್ರಾಮ ಪಂಚಾ ಯತಿ ವ್ಯಾಪ್ತಿಯ ಕೆರೆ ಹೂಳು ತೆಗೆಯುವ ಸ್ಥಳ, ಗೋಪನಹಳ್ಳಿ ಪಂಚಾಯತಿಯಲ್ಲಿ ಹಳ್ಳ ಪುನರ್‌ಚೇತನ, ಎನ್.ಮಹದೇವಪುರ ಮತ್ತು ನಲಗೇತನಹಟ್ಟಿ ಪಂಚಾಯತಿ ವ್ಯಾಪ್ತಿಯಲ್ಲಿ ಕೆರೆ ಹೂಳು ತೆಗೆಯುವ ಕಾಮಗಾರಿ ಸ್ಥಳಗಳಿಗೆ ಜಿಪಂ ಸಿಇಒ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಸ್ಥಳದಲ್ಲೇ ಮೊಬೈಲ್ ಮೂಲಕ ಕೂಲಿ ಕಾರ್ಮಿಕರ ಜಾಬ್ ಕಾರ್ಡ್, ಬ್ಯಾಂಕ್ ಖಾತೆ ವಿವರ ಮತ್ತು ಆಧಾರ್‌ಮಾಹಿತಿಯನ್ನು ಪರಿಶೀಲಿಸಿದ ಅವರು, ತಾಲೂಕಿನಲ್ಲಿ ಆರಂಭ ಮಾಡಿರುವ ಕಾಮಗಾರಿಗಳ ಕುರಿತು ಸ್ಥಳೀಯ ಅಧಿಕಾರಿ ಗಳೊಂದಿಗೆ ಸಮಾಲೋಚನೆ ನಡೆಸಿದರು. ಬಳಿಕ ಕೂಲಿ ಕಾರ್ಮಿಕರೊಂದಿಗೆ ಮುಕ್ತವಾಗಿ ಮಾತನಾಡಿದ ಸಿಇಒ, ಜಾಬ್ ಕಾರ್ಡ್ ಇರುವ ಪ್ರತಿ ಕಾರ್ಮಿಕ ಕುಟುಂಬಕ್ಕೆ ವಾರ್ಷಿ ಕವಾಗಿ 125 ದಿನಗಳ ಕಾಲ ಉದ್ಯೋಗ ನೀಡಲಾಗುವುದು. ಯೋಜನೆ ಯಲ್ಲಿ ಯಾವುದೇ ಹೆಣ್ಣು, ಗಂಡು ಬೇಧಭಾವವಿಲ್ಲದೆ ಪ್ರತಿಯೊಬ್ಬರಿಗೂ ದಿನಕ್ಕೆ ₹382 ಕೂಲಿಯನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಗ್ರಾಮೀಣ ಭಾಗದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದ ತಾಪಂ ಇಒ ಎಚ್.ಶಶಿಧರ್, ತಾಲೂಕಿನ 24 ಗ್ರಾಪಂ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರಿಗೆ ಕೆಲಸ ಒದಗಿಸಲಾಗಿದೆ. ಪ್ರಮುಖವಾಗಿ ಮಣ್ಣು ಸಂರಕ್ಷಣೆ ಕಾಮಗಾರಿಗಳ ಜತೆಗೆ ಕೆರೆಗಳ ಹೂಳು ತೆಗೆಯುವ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ತಾಲೂಕಿನಲ್ಲಿ ಪ್ರಸ್ತುತ ಹಮ್ಮಿಕೊಳ್ಳಲಾಗಿರುವ 159 ಕಾಮಗಾರಿಗಳಲ್ಲಿ ಒಟ್ಟು 69,732 ಕೂಲಿ ಕಾರ್ಮಿಕರು ದುಡಿಯುತ್ತಿದ್ದಾರೆ. ಕೂಲಿ ಬಟವಾಡೆಯ ಉಸ್ತುವಾರಿಯನ್ನು ವ್ಯವಸ್ಥಿತ ವಾಗಿ ನೋಡಿಕೊಳ್ಳಲಾಗುತ್ತಿದ್ದು, ಯಾವುದೇ ಗಂಭೀರ ಸಮಸ್ಯೆ ಯಿಲ್ಲ. ಸದ್ಯ ಎರಡು ವಾರದ ಬಾಕಿ ಉಳಿದಿದ್ದು, ಶೀಘ್ರವೇ ವಿಲೇವಾರಿ ಮಾಡಲಾಗುವುದು ಎಂದು ವಿವರಿಸಿದರು. ಪರಿಶೀಲನೆ ವೇಳೆ ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಸ್ಥಳೀಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

बैंक ऑफ़ बड़ौदा
Bank of Baroda
ಪ್ರಾದೇಶಿಕ ಕಛೇರಿ : ಶಿವಮೊಗ್ಗ

ತೀರ್ಥಹಳ್ಳಿ ಶಾಖೆ (8163)

ಖಾತಾ ಸಂಖ್ಯೆ 66/2248/687, ವಾರ್ಡ್ ಸಂಖ್ಯೆ 6, ಎ ಪಿ ರಸ್ತೆ, ತೀರ್ಥಹಳ್ಳಿ, ಶಿವಮೊಗ್ಗ, ಕರ್ನಾಟಕ – 577432, ದೂರವಾಣಿ: 9392186458, Email: vjtirt@bankofbaroda.co.in

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ
ಅನುಬಂಧ– IV-A [ನಿಯಮ 6 (2) ಮತ್ತು ನಿಬಂಧನೆ 8 (6)]

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6)ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್)ಬಳಿ ಅಡಮಾನವಾಗಿದ್ದು/ ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ **ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ** ಅವುಗಳನ್ನು ಆಧಾರದ । ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ಮೀಸಲು ಬೆಲೆ/ಇ–ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡತಿವೆ:

ಕ್ರ ಸಂ	ಸಾಲಗಾರ/ರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಋಣಭಾರಗಳನ್ನು ಹೊಂದಿರುವ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆಯನ್ನು ನೀಡಿ, ಯಾವುದಾದರೂ ಇದ್ದರೆ (ಅಡಮಾನ ಇಟ್ಟವರು: ಶ್ರೀ ಮಂಜುನಾಥ್ ಎಂ.)	ಒಟ್ಟು ಬಾಕಿ	ಇ–ಹರಾಜಿನ ದಿನಾಂಕ ಮತ್ತು ಸಮಯ	1.ಆಸ್ತಿಯ ಮೀಸಲು ಬೆಲೆ 2.ಇಎಂಡಿ 3.ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ	ಆಸ್ತಿಯ ಸ್ವರೂಪ (ರಚನಾತ್ಮಕ / ಭೌತಿಕ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
01	ಸಾಲಗಾರರು: ಶ್ರೀ ಮಂಜುನಾಥ್ ಎಂ. ಬಿನ್ ಟಿ ಮಲ್ಲಪ್ಪ, ವಾಟರ್ ಟ್ಯಾಂಕ್ ಹತ್ತಿರ, 11 ನೇ ಕ್ರಾಸ್, ಯುಡಿಪಿ ಲೇಔಟ್, ಚಿತ್ರದುರ್ಗ, ಕರ್ನಾಟಕ – 577501, ಸೈಟ್ ನಂ. ಪಿಡಿಎಲ್ – 4406, ವೈಭವ್ ವಿ ಲೇ-ಔಟ್, ಮೆದೆಹಳ್ಳಿ ಗ್ರಾಮ ಪಂಚಾಯತ್, ಚಿತ್ರದುರ್ಗ, ಕರ್ನಾಟಕ 577501	ಅಡಮಾನದ ವಾಸದ ಪ್ಲಾಟ್ ಮತ್ತು ಕಟ್ಟಡದ ಹಳೆಯ ಸರ್ವೇ ನಂ.67/5, ಹೊಸ ಸರ್ವೇ ನಂ.67/11 ಮತ್ತು 67/12, ಖಾತಾ ನಂ.4406/2, ಆಸ್ತಿ ನಂ. 151000203000102155, ಜಾಗದ ನಂ.02, ವಿಸ್ತೀರ್ಣ 100 ಚದರ ಯಾರ್ಡ್ ಆಗಿದ್ದು, ಮೆದೆಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಕರ್ನಾಟಕದಲ್ಲಿದ್ದು, ಕಟ್ಟಡವು 2015ರಲ್ಲಿ ಕಟ್ಟಲಾಗಿದೆ. ಚಕ್ಕುಬಂಧಿ:– ಪೂರ್ವ: ಸೈಟ್ ನಂ.03, ಪಶ್ಚಿಮ: ಸೈಟ್ ನಂ.01, ಉತ್ತರ: 9 ಮೀಟರ್ ಅಗಲದ ರಸ್ತೆ, ದಕ್ಷಿಣ: ಖಾಸಗಿ ಪರಿವರ್ತಿತ ಜಾಗ	ರೂಪಾಯಿಗಳು 38,27,107 04-08-2022 ರಂತೆ + ಹೆಚ್ಚುವರಿ ಬಡ್ಡಿ + ಶುಲ್ಕಗಳು ಮತ್ತು ವೆಚ್ಚಗಳು	20-11-2026 ಮಧ್ಯಾಹ್ನ 3.00 ರಿಂದ ಸಂಜೆ 4.00 ರವರೆಗೆ	1) ರೂ. 49,50,000/– 2) ರೂ. 4,95,000/– 3) ರೂ. 50,000/–	ಭೌತಿಕ ಸ್ವಾಧೀನ	19-10-2026 ರಿಂದ 19-11-2026 ರವರೆಗೆ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆ

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction.htm ಹಾಗೂ https://baanknet.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ಆಸಕ್ತಿಯುಳ್ಳ ಬಿಡ್ದಾರರು. **ಅಧಿಕೃತ ಅಧಿಕಾರಿ 9392186458.** ಗೆ ಸಹ ಕರೆ ಮಾಡಬಹುದು.

ಸ್ಥಳ: ತೀರ್ಥಹಳ್ಳಿ ದಿನಾಂಕ: 15-10-2026

ಸಹಿ/– ದೀಪಕ್ ಎನ್ ಹಡಕರ್
ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

Scanned with OKEN Scanner